ಗುರಾಯಿಸಿದರು. ಬಸವ ಎದ್ನೋ ಬಿದ್ನೋ ಅಂತ ಓಡಿಹೋದ.

ಭಾಗ 2

'ಏನಮ್ಮಾ ಇವಾಗ ಬಂದ್ರಾ, ಮನೇಲಿ ಎಲ್ರು ಹೆಂಗಾರ?'. ಬಾಯಲ್ಲಿ ಅದೇ ಆಗತಾನೆ ನಸೀತಿಕ್ಕಂಡು ಕೈ ಹೊರ್ಸಕಂಡು ಕುಂತಿದ್ದ ಶಾರದಮ್ಮ, ಮಗ ಸೊಸೆ ಊರಿಂದ ಬಂದಿದ್ದು ಕಂಡು ಸೊಸೇನ ಮಾತಾಡಿಸಿದಳು. 'ಹಾ ಅತ್ತೆ ಬೇಸಿದೀನಿ. ಎಲ್ರೂ ಬೆಸಾರಾ' ಅನ್ನುತ್ತಾ ಸೊಸೆ ದಿಮಿದಿಮಿ ನಡೆಯುತ್ತಾ ಒಳಹೋದಳು. 'ಲೋ ನಿಂಗ್ಯಾ, ಯಾಕ್ ಕೂಸು ಸೆಟಗಂಗ ಕಾಣ್ತಾಳಾ ಏನಾಯ್ತು?' ಅಂತ ಶಾರದಮ್ಮ ಅಂದಾಗ ನಿಂಗ್ಯಾ ತಾಯೀನ ಒಮ್ಮೆ ದಿಟ್ಟಿಸಿ ನೋಡಿ, 'ಈ ಹೆಂಡ್ರು ಇದಾರಲ್ಲ, ತವರು ಮನಿಗೆ ಹೋಗುವಾಗ ಗಲ್ಲಗಲ್ಲ ಅಂತ ಗೆಜ್ಜೆಕಟ್ಟಿಕಂಡು ನಕ್ಕಂತ ಹೋಗ್ತರಾ. ಅದೇ ಗಂಡನ ಮನಿಗೆ ರೆಡಿಯಾಗಿ ಬರಬೇಕಂದ್ರ ಚೇಳು ಕಡಿದಂಗ ಆಗ್ತಾದ' ಅಂದ. ಶಾರದಮ್ಮಗ ಒಂದು ತಿಳೀಲಿಲ್ಲ. ಶಾರದಮ್ಮ ಅಣ್ಣನ ಮಗಳನ್ನ ಮಗನಿಗೆ ತಂದುಕಂಡಿದ್ದಳು. ಚಿಕ್ಕಂದಿನಲ್ಲೇ ಇವರಿಬ್ಬರು ಗಂಡ ಹೆಂಡತಿ ಅಂತ ಮಾತಾಗಿತ್ತು. ಸೊಸೆ ನೆರತು ಒಂದು ವರ್ಷಕ್ಕೆ ಮನೆ ತುಂಬಿಸಿಕೊಂಡಿದ್ದಳು. 'ಅತ್ತೆ ಮನೇಲಿ ನೀರು ಕಲಾಸ್ ಆಗ್ಯಾವ. ಬಾವಿಗೆ ಹೋಗಿ ತಗಂಡು ಬರ್ತಿನಿ' ಅಂತ ಸೊಸೆ ಬಿಂದಿಗೇನ ನಡುವಿನ ಮೇಲೆ ಇಟ್ಟುಕೊಂಡು ಪಸಪಸ ಹೋದಳು. ಎಲಾ ಇವಳಾ, ಬಂದು ಅರ್ಧ ತಾಸು ಆಗಿಲ್ಲ, ಅದಲ್ಲದ ಮನ್ಯಾಗ ಮುಂಜಾಲೆ ನಳದ ನೀರು ತುಂಬಿಸೀನಿ. ತಪೆಲಿ ತುಂಬಾ, ಗಡಿಗಿ ತುಂಬಾ ಅದಾವ. ಇದ್ರೆ ನಾಲ್ಕು ಬಿಂದಿಗಿ ಖಾಲಿ ಇದಾವೇನು. ನಾಳೆ ಏನಾದರೂ ನಳ ಬರಲ್ಲ ಅಂತ ಗಂಡ ಏನಾರ ಹೇಳಿರಬೇಕು. ಅದ್ಕ ಹೊಂಟಾಳೆನು ಅನ್ನುತ್ತಾ ಶಾರದಮ್ಮ ಗ್ವಾದಲಿ ಕಡಿಗೆ ಹೋಗಿ ಎಮ್ಮೆ ಎಂಡಿ ಬಳಿದು ಅಲ್ಲೇ ಇದ್ದ ಗ್ವಾಡಿಗೆ ಅಂಗೈ ಅಗಲ ಕುಳ್ಳು ಬಡಿಯತೊಡಗಿದಳು.

'ಏನ್ ಶಾರದಮ್ಮ, ಮೊಮ್ಮಗ ಬರಕತ್ಯಾನ ಏನ್ ಕುಳ್ಳು ಬಡ್ಯಾಕತಿದಲ್ಲ' ಅಂತ ಪ್ರಭಣ್ಣ ಮುದೇತ ಗಮತ್ ಮಾಡಿದ. 'ನಿನ್ನ ಬಾಯಾರಿಕಲೇ ಹಂಗೆ ಆಗ್ಲಿ ದೊಡಪ್ಪ, ನಿನ್ನ ಬಾಯಾಗ ಸಕ್ರಿ ಹಾಕ್ತಿನಿ' ಅಂತ ಹೇಳಿ ತಲೆಮ್ಯಾಲೆ ಸೆರಗು ಹಾಕಿಕಂಡು ನಿಂತಳು. 'ಮುಂದಿನ ವರ್ಷ ಅನವಪ್ಪಿಗಿ ಮೊಮ್ಮಗ ಬರ್ತಾನ ಬಿಡು' ಅನ್ನುತ್ತಾ ಪ್ರಭಣ್ಣ ಮುದೇತ ನಕ್ಕೊಂತ ಮುಂದಕ ನಡೆದ. ಶಾರದಮ್ಮ ಮೊಮ್ಮಗನ ಚಿತ್ರ ಕಲ್ಪಿಸಿಕೊಳ್ಳುತ್ತಾ ಮತ್ತಷ್ಟು ಮುತುವರ್ಜಿಯಿಂದ ಎಂಡೇನ ಕಲಿಸಿಕಂಡು ಕುಳ್ಳನ್ನು ಚೆಂದಾಗಿ ಬಡಿಯತೊಡಗಿದಳು. ಅಂಗೈಯಗಲದ ಎಂಡೆಯಿಂದ ಬಡಿದ ಕುಳ್ಳುಗಳು ಹಣೆಗೆ ಹಚ್ಚಿಕಂಡ ಟಿಕಲಿಯಂತೆ ಚೆಂದಗೆ ದುಂಡಗೆ ಕಾಣುತ್ತಿದ್ದವು.

'ಅಲಾಂಗೆ ಎಲ್ಲಿ ಹೋಗ್ಯಾಳಾ ಈಕೀ ಕಾಣವಳ್ಳಲಲ್ಲ' ಅನ್ನುತ್ತಾ ನಿಂಗ್ಯಾ ಮನೇಲಿ ಹೆಂಡತಿ ಇಲ್ಲದ್ದು ಕಂಡು ಶಾರದಮ್ಮನ ಬಳಿಬಂದು ಕೇಳಿದ. "ಯಪ್ಪಾ ಇವತ್ತು ನಳದ ನೀರು ಬಂದಿಲ್ಲ. ಹುಡುಗೀನ ಊರಿಂದ ಕರಕಂಡು ಬಂದಾವ ಹಂಗೆ ದುಬುಕ್ಕನ ಅಂತ ಹೊರಗ ಓಡಿ ಹೋದಿ. ಪಾಪ ಆ ಹುಡುಗಿ ಬಿಂದಿಗಿ ತಗೊಂಡು ಬಾವಿಗೆ ಹೊಗ್ಯಾದ. ಅಡಿಗಿ ಮಾಡಾಕ ಒಂದು ಕಾಳು ನೀರಿಲ್ಲ' ಅಂತ ತನಗರಿವಿಲ್ಲದಂತೆಯೇ ಸಟಕ್ಕನ ಸುಳ್ಳು ಹೇಳಿ ಶಾರದಮ್ಮ ನಾಲಿಗೆ ಕಚ್ಚಿದಳು. ಅದೇ ಆಗತಾನೆ ಗೋಡೆಗೆ ಬಡಿದಿದ್ದ ಕುಳ್ಳು ಸರಕ್ಕನೆ ಉಚ್ಚಿಬಿತ್ತು. ಮತ್ತೆ ಬಡಿದಳು. ಮತ್ತೆ ಉಚ್ಚಿಬಿತ್ತು. ಒಂದೂ ಸರಿಗಿ ಕೂಡಲಿಲ್ಲ. ಎಲ್ಲಾ ಎಂಡೆ ಕಲಿಸಿಕಂಡು ಕಸಕಡ್ಡಿ ಎಲ್ಲ ಬಳಿದು ಪುಟ್ಟಿಗಿ ತುಂಬಿಕಂಡು ತಲೆಮೇಲೆ ಹೊತ್ತುಕಂಡು ತಿಪ್ಪಿಗಿ ಹಾಕೋಕೆ ಹೋದಳು. ಶಾರದಮ್ಮನ ಸೊಸೆ ತಲೆಮೇಲೆ ಬಿಂದಿಗಿ ಇಟ್ಟಕಂಡು ಯಾರೋ ತನ್ನ ವಾರಿಗೆಯ ಹುಡುಗಿ ಜೊತೆ ನಕ್ಕಂತ ಮಾತಾಡ್ತ ಬರುತ್ತಿದ್ದಳು. ಎಂಡಿನ ತಿಪ್ಪಿಗಿ ಹಾಕಿ ದೂರದಲ್ಲಿ ಸೊಸೆ ಬರೋದು ಕಂಡು ಅಲ್ಲೇ ನಿಂತಳು ಶಾರದಮ್ಮ. ಏನೇನೋ ನಕ್ಕಂತ ಮಾತಾಡ್ತ ಬರುತ್ತಿದ್ದ ಸೊಸೆ ಶಾರದಮ್ಮನ ನೋಡಿ ಗಾಬರಿಯಾಗಿ, 'ಅತ್ತಿ, ಈಕೀ ನನ್ನ ವಾರಿಗಿ ಗೆಳತಿ ಇದಾಳ. ನಮ್ಮೂರ ತಳವಾರ ಮಲ್ಲಯ್ಯನ ಮಗನಿಗಿ ಇಕೀನ ಕೊಟ್ಟಾರ' ಅಂದಳು. 'ಹೌದಾ, ಇಲ್ಲಿ ಯಾರ ಮಗಳು ನೀ, ನಿನ್ನ ನಾ ಯಾವತ್ತು ನೋಡಿಲ್ಲಲ್ಲ' ಅಂತ ಶಾರದಮ್ಮ ಅಚ್ಚರಿಯಿಂದ ಆ ಹುಡುಗೀನ ನೋಡಿದಳು. ಆ ಹುಡುಗಿ, 'ಹೇ ಸಣಮ್ಮ ನಾನು ಆ ಕೌರಿ ಹನುಮಂತನ ಮಗಳು ಅದೀನಿ. ನಿಮ್ಮ ಮನೆಗೆ ನಮ್ಮ ಸಣಪ್ಪ ಇದ್ದಾಗ ಹಾಲು ಕೊಡಕ ಬರ್ತಿದ್ದಿನಲ್ಲಾ' ಅಂದಳು. 'ನಿನ್ನ ಹೆಸರು ಗಾಯಿತ್ರಿ ಅಲಾ, ಇಷ್ಟು ಚೋಟು ಹುಡುಗಿ ಇದ್ದಿ, ಎಷ್ಟು ಎತ್ತರ ಆಗಿದ್ದಿ. ನಿನ್ನ ಮದುವಿಗೆ ನಾ ಬರಲಿಲ್ಲ ನಿಮ್ಮ ಅಣ್ಣ ನಿಂಗ್ಯಾ ಬಂದಿದ್ದ. ತಣ್ಣಗಿರವ್ವ ತಾಯಿ, ಮನೆತುಂಬಾ ಮಕ್ಕಳಾಗಲಿ' ಅಂತ ಹೇಳಿ ಸೊಸೇನ ಕರಕಂಡು ಮನಿಗೆ ಹೋದಳು.



ಭಾಗ 3

ಒಳಮನೇಲಿ ಮಗ ಸೊಸೆ ಜಗಳ ಆಡುತ್ತಿದ್ದರು. ಶಾರದಮ್ಮ ಇವರ ಜಗಳ ಯಾವಾಗ್ಲೂ ಇದ್ದಿದ್ದೆ ಅಂತ ಅಕ್ಕಿ ಹಸನು ಮಾಡುತ್ತಾ ಕುಳಿತಿದ್ದಳು. ಹಳೆ ಅಕ್ಕಿ ಅವು ಎಷ್ಟು ಹಸನು ಮಾಡಿದರು ಬೆಳ್ಳಗೆ ಇದ್ದ ಅಳ್ಳು ಇವಳ ಕಣ್ಣು ತಪ್ಪಿಸಿ ಅಕ್ಕಿ ಜೊತೆ ಉಳಿಯುತ್ತಿದ್ದವು. ಮೊರದಲ್ಲಿ ಕೇರಿ ಆಮೇಲೆ ಜಲಿಟಿ ಹಿಡಿದು ಒಂದು ಚೀಲ ಹಸನು ಮಾಡಿದಳು. ಆದರೂ ಅವರ ಜಗಳ ಮುಗಿದಿರಲಿಲ್ಲ. 'ಹೇ ನಿಂಗ್ಯಾ, ಯಾವಗ್ಲೂ ಆ ಹುಡುಗಿ ಜತಿ ಯಾಕ ಜಗಳ ಬೀಳಿತಿ. ನನಗ ಒಂದು ತಿಳಿವಲ್ದು' ಅಂದಳು. 'ಈಕೀ ಏನ ಮಾಡ್ಯಾಳ ಅಂತ ನಿನಗ ಗೊತ್ತಾದ್ರ ನೀನೆ ಈಕೀಗಿ ಮಾರಿಮಾರಿ ಹೊಡ್ತಿ. ಕಳ್ಳತನಲೆ ಫೋನ್ ಇಟಕಂಡು ಕುಸುಕುಸು ಅಂತ ಯಾವನೋ ಜೊತೆ ಮಾತಡ್ತಿದ್ಲು. ಕೇಳಿದ್ರೆ ಬಾವಿಗೆ ನೀರು ತರಕ ಹೋದಾಗ ಸಿಕ್ಕಾದ ಅಂತ ನನಗ ಜಬರಸ್ತಾಳ' ಅಂದ.

'ಸಿಕ್ಕರೆ ಸಿಕ್ಕಿರಬಹುದು, ನಿನಗ ಹೇಳದು ಮರಿತಿರಬಹುದು. ಅದ್ಕ ಹಂಗೆಲ್ಲಾ ಅನ್ನದು ತಪ್ಪು. ನೋಡು ನಿಂಗ್ಯಾ, ಹೋಗಿ ಎಮ್ಮಿಗಳಿಗಿ ಮೇವು ಹಾಕಿ ಬಾ. ಒಂದೇ ಸಮನೆ ಒದರಕತ್ಯಾವ' ಅನ್ನುತ್ತಾ ಕೇರಿದ ಅಕ್ಕಿ ಒಳಗಿಟ್ಟಳು. 'ನೀ ನಿಮ್ಮಣ್ಣನ ಮಗಳು ಅಂತ ತಲಿಮ್ಯಾಲೆ ಕುಂದ್ರಿಸಕಂಡಕಾ ಈಕೀ ಇಷ್ಟು ಮ್ಯಾಕೇರಳ' ಅನ್ನುತ್ತಾ ನಿಂಗ್ಯಾ ಎಮ್ಮಿಗಳಿಗಿ ಮೇವು ಹಾಕೋಕೆ ಹೋದ.

ಶಾರದಮ್ಮಗ ಸೊಸೆ ಹತ್ತಿರ ಫೋನ್ ಇರುವ ವಿಚಾರ ಮೊದಲೇ ಗೊತ್ತಿತ್ತು. ಒಮ್ಮೆ ಒಳಮನೆಯಿಂದ ಗುಸುಗುಸು ಅಂತ ಮಾತು ಕೇಳಿ ಬರುತ್ತಿತ್ತು. ಒಬ್ಬಾಕಿನೆ ಏನು ಗುಸುಗುಸು ಪಿಸುಪಿಸು ಅನಕತ್ಯಾಳ ಅಂತ ಒಳಬಂದಾಗ ಕಿವಿಗಿ ಫೋನ್ ಇಟಗಂಡು ತಾನು ಬಂದಿದ್ದು ಕಬರಿಲ್ಲದಂಗ ಮಾತಾಡುತ್ತಿದ್ದಳು. ಗಂಡ ಏನಾದ್ರು ಕೊಡಿಸಿರಬಹುದು, ಅವ್ನ ಜೊತೆ ಮಾತಾಡಕತ್ಯಾಳ ಅಂತ ಸುಮ್ಮನಾಗಿದ್ದಳು. ಒಮ್ಮೆಯಂತೂ ಶಾರದಮ್ಮ ಕಟ್ಟಿಗೆ ಕಡಿದುಕಂಡು ಬಂದು ಹೊರೆ ಇಳಿಸಿ ಮನೆ ಒಳಗೆ ಬಂದಾಗ ಸೊಸೆ ಮನೇಲಿ ಇರಲಿಲ್ಲ. ಕದಾನೂ ಸಹ ಹಾಕದೇ ಎಲ್ಲಿಗೆ ಹೋಗಿರಬಹುದು ಅಂತ ಯೋಚಿಸುತ್ತಾ ನೀರು ಕುಡಿದು ಅಲ್ಲೇ ಇದ್ದ ಬಿಸಾಣಿಕೆಲಿ ಗಾಳಿ ಹಾಕಿಕಂಡು ಕುಂತಳು. ನೀಲಮ್ಮ ಬಯಲಿಗೆ ಸಂಡಾಸಿಗೆ ಅಂತ ತಂಬಿಗೆ ತಗಂಡು ಹೋದವಳು ಮುಗಿಸಿಕಂಡು ಸೀದಾ ಶಾರದಮ್ಮನ ಮನಿಗೆ ಬಂದು, 'ಶಾರದಮ್ಮ, ಏನ್ ಮಾಡಕತಿದವ್ವ' ಅನ್ನುತ್ತಾ ಅಲ್ಲೇ ಹೊರಗಡೆ ಗುಂಡಲ್ಲಿ ಇದ್ದ ನೀರು ತಗಂಡು ಕಾಲಿಗಿ ಹಾಕಿಕಂಡು ಒಳಬಂದಳು. "ಬಾ ನೀಲಾ, ಕುಂತ್ಕಾ. ಚಹಕ ಇಡತಿನಿ ನಾನು. ಇವಾಗ ಕಟಿಗಿ ಹೊರೆ ಕಡಕಂಡು ಒತಕಂಡು ಬಂದಿನಿ, ತಲೆದಿಮ್ಮ ಅನಕತ್ಯಾದ, ತಟಕ ಚಹ ಮಾಡಿಕಂಡು ಕುಡ್ಯಾಮು" ಅಂದಳು. 'ಇಲ್ಲವ್ವ ಗಾಳಿ ಮಳಿ ಎದ್ದಾದ. ಎಲ್ಲದೆಲ್ಲಿ ಮನ್ಯಾಗ ಬಿಟ್ಟು ಬಂದಿನಿ, ಹೊಗ್ತೀನಿ' ಅಂದಳು. ಹಾಗೆ ಮುಂದುವರೆದು, 'ಅಂದಾಂಗ ನೀವು ಯಾವಾಗ ಫೋನ್ ತಗಾಂಡ್ರಿ, ನನ್ಗಾ ಹೇಳ್ಲಿಲ್ಲಲ್ಲ. ನಿನ್ನ ಸೊಸೆ ಬಯಲಿಗೆ ಸಂಡಾಸಿಗೆ ಬಂದಿದ್ಲು. ಇನ್ನು ಅಲ್ಲೇ ಇದಾಳ. ಯಾರ ಜೊತೆ ಫೋನಲ್ಲಿ ಮಾತಾಡ್ತಿದ್ಲು'. 'ಹೌದು ನಮ್ಮ ನಿಂಗ್ಯಾ ಹೆಂಡತಿಗಿ ಕೊಡಸ್ಯಾನ. ತವರು ಮನಿ ಜೊತೆ ಮಾತಡ್ತಿರಬೇಕು ನೋಡು. ನೀ ನಿನ್ನ ಮಗಳ ಜೊತೆ ಮಾತಾಡಬೇಕಂದ್ರ ಬಾ ಇದೇ ಫೋನಿಂದ ಮಾತಾಡಂತಿ' ಅಂದಳು. 'ಆಯಿತು ಬಿಡು ಶಾರದಮ್ಮ, ನಾ ಬರ್ತಿನಿ. ದೆವ್ವದಂಥ ಗಾಳಿ ಬಿಟ್ಟದ ಮ್ಯಾಳಿಗಿ ಮ್ಯಾಲೆ ಬಟ್ಟೆ ಹಾಕೀನಿ. ಹುಡುಗರು ನೋಡ್ತಾರೋ ಇಲ್ಲ ತೆಗಿಬೇಕು ಬರ್ತಿನಿ'' ಅನ್ನುತ್ತಾ ಹೋದಳು. ನಾ ಅವತ್ತೆ ನಿಂಗ್ಯಾನ ಕೇಳಬೇಕಿತ್ತು, ಈ ಫೋನ್ ನೀ ಕೊಡಿಸಿದೇನು ಅಂತ. ತಪ್ಪು ಮಾಡಿದೆ ನಾ. ಈ ನಿಂಗ್ಯಾಗೆ ಈಕೀ ಹತ್ತಿರ ಫೋನ್ ಇರೋದು ಗೊತ್ತಿಲ್ಲ ಅಂದ್ರ ಇದನ್ನು ಯಾರು ಕೊಡಿಸರಬಹುದು? ಯಾರ ಜತಿ ಈಕೀ ಮಾತಡಕತ್ಯಾಳ' ಅಂತ ಶಾರದಮ್ಮ ತಲ್ಯಾಗ ಹುಳ